ಆರ್. ಮಧುಸೂದನ್, ಹಾಸನ
*ವಾಟಾಳ್ ನಾಗರಾಜರ ಶಕ್ತಿ ಇರುವುದು ಅವರ ಟೋಪಿ, ಕಪ್ಪು ಕನ್ನಡಕದಲ್ಲಂತೆ; ಯಡ್ಡಿಯದು?*



ಎರಡು ಬೆರಳುಗಳಲ್ಲಿ!

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
*ವಿದ್ಯುತ್ ಆಗಾಗ ಕೈ ಕೊಡುತ್ತಲ್ಲಾ, ಯಾರ ಜೊತೆ ಓಡಿಹೋಗಿರತ್ತೆ ರಾಮ್‌ಜೀ?*
ಓಡಿ, ಓಡಾಡಿ ಬೇಜಾರಾಗಿ ಒಂಟಿಯಾಗಿ ಇಲ್ಲೇ ಒಂದು ಷಾರ್ಟ್ ಸರ್ಕ್ಯೂಟ್ ಹೋಗಿರತ್ತೆ ಅಷ್ಟೆ!

ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ
*ಮೊದಲರ್ಧವನ್ನು ಪೂರ್ವಾರ್ಧ ಎಂದಮೇಲೆ ಕೊನೆಯರ್ಧವನ್ನು ಪಶ್ಚಿಮಾರ್ಧ ಎನ್ನದೆ ಉತ್ತರಾರ್ಧ ಎನ್ನುವುದೇಕೆ ರಾಂಜಿ? ತಮಾಷೆ ಬೇಡ.*
ಪೂರ್ವಕಾಲ ಎಂದರೆ ಮೊದಲಿನ ಕಾಲ, ಪೂರ್ವ ಎಂದರೆ ಮೊದಲು; ಉತ್ತರಕ್ರಿಯೆ ಎಂದರೆ ನಂತರದ್ದು, ಉತ್ತರ ಎಂದರೆ ನಂತರದ ಎಂದರ್ಥ.

ಸಿ. ವೆಂಕಟೇಶರಾವ್, ಕುದೂರು
*ಗಂಡೆದೆಯಿರುವ ಎಂಟೆದೆ ಮಹಿಳೆ ಯಾರು?*
ಇದ್ದದ್ದೇ ಒಬ್ಬರು ಶ್ರೀಮತಿ ಇಂದಿರಾಗಾಂಧಿ!

ಬೋ.ಪಾ. ವೆಂಕಟೇಶ್, ಸಮೇತನಹಳ್ಳಿ
*ಇದುವರೆಗೂ ನಿಮ್ಮ ಮನಸ್ಸಿನಲ್ಲಿ ಉತ್ತರ ಹೊಳೆಯದೇ ಕಾಡುತ್ತಿರುವ ಪ್ರಶ್ನೆ ಯಾವುದು?*



ಟಿವಿ ಚಾನಲ್‌ಗಳು ಜ್ಯೋತಿಷ್ಯದ ಕೈಗೆ ಭವಿಷ್ಯ ಕೊಟ್ಟು ವಿಜ್ಞಾನದ ಬದಲು ಅಜ್ಞಾನ ಬೆಳೆಸುತ್ತಿರುವುದು ಏಕೆಂಬುದು!

ಡಿ.ಎಲ್. ಚಂದ್ರಿಕಾ, ಚನ್ನಗಿರಿ
*ಸರ್ಕಾರಿ ಅಂಬುಲೆನ್ಸ್‌ಗೆ 108 ಎಂಬ ಸಂಖ್ಯೆಯನ್ನೇ ಕೊಟ್ಟಿರುವುದು ಏಕೆ?*
ಅದರಲ್ಲಿ ಹೋದವರಿಗೆ ಅಷ್ಟೋತ್ತರವೇ ಗತಿ ಅಂತ!

ಕೆ.ಎಸ್.ಕನಕಾಂಬಿಕ, ಶಂಕರಘಟ್ಟ
*ಬರೀ ಅಡ್ಡಹೆಸರನ್ನೇ ಕರೀತಾರಲ್ಲಾ, ಹಾಗಾದ್ರೆ ಹೆಸರನ್ನು ಇಡೋದಾದ್ರೂ ಯಾಕೆ ಗುರು?*
ಕಂಬಿ, ಬಿಂಕ, ಕನಕ, ಕಾಂಬಿ ಎಂದೆಲ್ಲಾ ಕರೆಯಬೇಕಾದರೆ ಕನಕಾಂಬಿಕವೇ ಬೆಸ್ಟ್!

ವಿ.ಹೇಮಂತಕುಮಾರ್, ಬೆಂಗಳೂರು
*ಜಿಗುಪ್ಸೆಗೊಂಡ ಜೀವಕ್ಕೆ ಸಾಂತ್ವನವೇನು?*
ಆತ್ಮವನ್ನು ಮೇಲಕ್ಕೆ ಕಳುಹಿಸಲು ಪ್ರಯತ್ನಿಸುವ ಬದಲು ಆತ್ಮವಿಶ್ವಾಸವನ್ನು ಮೇಲಕ್ಕೆ ತನ್ನಿ!

ಓಂ ಚನ್ನೇಶ್, ಅರಬಿಳಚಿ ಕ್ಯಾಂಪ್
*ಹೆತ್ತವಳ ಕೈತುತ್ತಿಗೂ, ಕೈಹಿಡಿದವಳ ಬಾಯ್ ಮುತ್ತಿಗೂ ಇರುವ ದೊಡ್ಡ ವ್ಯತ್ಯಾಸವೇನು?*
ಗಂಡು ಮೊದಲನೆಯದಕ್ಕೆ ಬಾಯಿ ಬಿಡುತ್ತಾನೆ, ಎರಡನೆಯದಕ್ಕೆ ಬಾಯ್‌ಬಾಯ್ ಬಿಡುತ್ತಾನೆ!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ರಾಮನ ಹೆಸರಿನ ನೀವು ಯಾರನ್ನಾದರೂ ಅಗ್ನಿಪರೀಕ್ಷೆಗೆ ಗುರಿಮಾಡಿದ್ದೀರಾ?*
ಒಮ್ಮೆಯಲ್ಲ, ಪ್ರತಿ ವಾರ. ಬೇರಾರನ್ನೂ ಅಲ್ಲ, ನನ್ನನ್ನೇ; ಈ ಅಂಕಣಕ್ಕೆ ಉತ್ತರಿಸುವುದು ಅಗ್ನಿಪರೀಕ್ಷೆಯೇ!

ಕೃಷ್ಣ ಪರಮ, ಬೆಂಗಳೂರು
*ಸಾವಿನಲ್ಲೂ ಜೋಕೇ?*
ಅಷ್ಟು ದೂರದ ದಾರಿಯಲ್ಲವೇ...
ಯಮನೊಡನೆಯೂ ಹರಟುತ್ತಾ, ನಗುನಗುತ್ತಾ ಸಾಗುವುದೇ ಸೂಕ್ತ!

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
*ಮೊಬೈಲ್ ಪ್ರೀತಿ ಇದ್ದಂತೆ; ಹುಡುಗಿ ಸಿಮ್ ಕಾರ್ಡ್ ಇದ್ದಂತೆ, ಮದುವೆ...?*
ಹೆಣ್ಣಿಗೆ ನೆಟ್‌ವರ್ಕ್; ಗಂಡಿಗೆ ಪರ್ಮನೆಂಟ್ ರೀಚಾರ್ಜ್ ಅಕೌಂಟ್!

ಕೇಶವ ಎನ್. ಪೈ, ಕಾಸರಕೋಡ
*ಕಲ್ಲು ಹೊಡೆದರೆ ಕಾಯಿ ಉದುರುತ್ತೆ, ಕಣ್ಣು ಹೊಡೆದರೆ?*
ಹಲ್ಲು ಉದುರತ್ತೆ!

ನೇ.ಗೋ.ಭ, ಕುಕ್ಕೆ ಸುಬ್ರಹ್ಮಣ್ಯ
*ರಾಮ್‌ಜೀ, ಷೋಡಶಿಯೊಬ್ಬಳು ನಿಮಗೆ ಕಿಸ್ ಕೊಡಲು ಬಂದರೆ ಏನು ಮಾಡುವಿರಿ?*
ಛೆ! ಸಿಕ್ಕ ಸಿಕ್ಕ ಹುಡುಗಿಯರಿಗೆಲ್ಲಾ ಕಿಸ್ ಕೊಡುತ್ತಾ ಕೂಡಲು ನಾನೇನು ಬಿಡದಿ ಬಿಟ್ಟ ಮಠಾಧೀಶನೇ...?!

## ಬಹುಮಾನಿತ ಪ್ರಶ್ನೆ

ನವಿರವಿ, ಬಾಳೆಹೊನ್ನೂರು
*ಶಿವ ಚಂದಿರನನ್ನು ಯಾಕೆ ತಲೆಯಮೇಲೆ ಇಟ್ಟುಕೊಂಡಿದ್ದಾನೆ?*
ಗಂಗೆ ಸೋರದಂತೆ, ಜಟೆ ಜಾರದಂತೆ ಇರಲು ಶಿವ ಧರಿಸಿರುವ ಜಗತ್ತಿನ ಮೊಟ್ಟಮೊದಲ ಹೇರ್ ಕ್ಲಿಪ್ಪೇ ಚಂದಿರ!

ಶಿವಕುಮಾರ್ ಎಂ. ಮಂಗಳೂರು
*ಡಯಟಿಂಗ್ ಮತ್ತು ಡೇಟಿಂಗ್‌ಗೆ ಇರುವ ವ್ಯತ್ಯಾಸವೇನು?*
ಡಯಟಿಂಗ್‌ನಿಂದ ದೇಹ ಕರಗುತ್ತದೆ, ಡೇಟಿಂಗ್‌ನಿಂದ ಬ್ಯಾಂಕ್ ಬ್ಯಾಲೆನ್ಸ್ ಕರಗುತ್ತದೆ!

ಪ್ರಭುಪ್ರಸಾದ್ ನಡುತೋಟ, ಶೃಂಗೇರಿ
*ರಾಮ್‌ಜೀ, ಈಗಿನ ಕಾಲದಲ್ಲಿ ಹಣ ಮುಖ್ಯಾನಾ, ಹೆಸರು ಮುಖ್ಯಾನಾ?*
ಹೆಸರೇ! ಬೇನಾಮಿ ಆಸ್ತಿ ಮಾಡಬೇಕಾದರೂ ಒಂದು ಹೆಸರು ಇರಲೇಬೇಕು!

ಪಿ.ಜೆ. ರಾಘವೇಂದ್ರ, ಮೈಸೂರು
*ದ್ವಿ ವಿವಾಹಿತ ರಾಜಕಾರಣಿಗೆ ನಿಮ್ಮ ಕಿವಿಮಾತೇನು ರಾಮ್?*



ಕಿವಿ ಕಚ್ಚಲು ಎರಡೂ ಕಡೆ ಪತ್ನಿಯರಿರುವಾಗ ನನ್ನ ಮಾತು ಹೇಗೆ ಕೇಳಿಯಾರು ಬಿಡಿ ಸಾರ್!

ಜಾಕೋಬ್ ಡಿಸೋಜ, ಕುರುವಳ್ಳಿ
*ಕುಡಿತಕ್ಕೆ ಎಣ್ಣೆ ಹಾಕೋದು ಅಂತಾರಲ್ಲಾ, ಯಾಕೆ ಸಾರ್?*
ಯಾವುದೇ ಸ್ಕ್ರೂ ಟೈಟ್ ಆಗಿದ್ದರೆ ಕೊಂಚ ಎಣ್ಣೆ ಹಾಕಿದರೆ ಲೂಸ್ ಆಗುತ್ತಲ್ಲಾ, ಇದೂ ಹಾಗೇ ಆದ್ದರಿಂದ!

ಮಲ್ಲಿಕಾರ್ಜುನ ಹ. ಬಗಲಿ, ಗಿರಗಾಂವ
*ಹಣ್ಣುಗಳನ್ನು ಮೊದಲು ತಾನು ಕಚ್ಚಿ ಕಚ್ಚಿ ರಾಮನಿಗಾಗಿ ಶಬರಿ ತಂದಿರುವುದೇಕೆ?*
ಶಬರಿಯದು ಜಗತ್ತಿನ ಮೊಟ್ಟಮೊದಲ ಉಚಿತ ಖಾನಾವಳಿ; ಖಾನಾವಳಿಯಲ್ಲಿ ಎಂಜಲು ಕೊಡುವುದು ವಾಡಿಕೆ!

ಗಣೇಶ ಎಂ. ಪೈ, ಚಿಕ್ಕಮಗಳೂರು
*ಇತ್ತೀಚೆಗೆ ಟೀಂ ಸೇರಿದ ಮಂತ್ರಿಗಳು ಪತ್ರಿಕಾ ಸಂವಾದದಲ್ಲಿ ಅವಧಿಯುದ್ದಕ್ಕೂ ಸಿಕ್ಸರ್ ಎಂದಿದ್ದಾರಲ್ಲಾ, ಸಾಧ್ಯವೆ?*
ಸಾಧ್ಯ! ಕಂಗ್ಲಿಷ್ ಯುಗವಲ್ಲವೇ, ಅವರು ಹೇಳಿದ್ದು ಅವಧಿಯುದ್ದಕ್ಕೂ sick sir ಎಂದು!

■ ರಾಮ್